# ಮಿಸ್ತ್ರಿಯವರ ‘ಟಾಟಾ’

ಎಲ್ಲ ಕಂಪೆನಿಗಳೂ ಖ್ಯಾತಿ ಮತ್ತು ಲಾಭ ಗಳಿಕೆಯ ಉತ್ತುಂಗಕ್ಕೆ ಹೋದಾಗ, ಬಿಕ್ಕಟ್ಟನ್ನು ಎದುರಿಸುವುದು ಸಹಜ ವಿದ್ಯಮಾನ. ಯಶಸ್ಸಿನ ತುತ್ತ ತುದಿ ಎಂದರೆ ಹಾಗೆಯೇ. ಅಲ್ಲಿಂದ ಮೇಲೆ ಹೋಗಲು ಅವಕಾಶವಿಲ್ಲ; ಕೆಳಗೆ ಜಾರಿದರೆ ಹಾದಿಬೀದಿಯಲ್ಲಿದ್ದವರೆಲ್ಲ ಕಾಮೆಂಟುಗಳನ್ನು ಒಗೆಯುತ್ತಾರೆ. ಹಿಂದೆ ಇನ್‌ಫೋಸಿಸ್ ಟೆಕ್ನಾಲಜೀಸ್ ಕಂಪೆನಿಯೂ ಇಂತಹ ಬಿಕ್ಕಟ್ಟನ್ನು ಎದುರಿಸಿತ್ತು. ಆಗ ನಿವೃತ್ತಿ ಪ್ರಕಟಿಸಿ ನೆಮ್ಮದಿಯಾಗಿದ್ದ, ಇನ್‌ಫೋಸಿಸ್ ಸ್ಥಾಪಕ ಎನ್.ಆರ್.ನಾರಾಯಣಮೂರ್ತಿಯವರೇ ಕಂಪೆನಿಯ ಸಾರಥ್ಯಕ್ಕೆ ಮರಳಿ ಬಂದು ಹೆಗಲು ಕೊಟ್ಟರು. ಈಗ ಟಾಟಾ ಉದ್ಯಮ ಗುಂಪಿನಲ್ಲೂ ಅಂತಹದ್ದೇ ವಿದ್ಯಮಾನ ಜರುಗಿದೆ. ಚೇರ್‌ಮನ್ ಆಗಿ ನಾಲ್ಕು ವರ್ಷಗಳ ಹಿಂದೆ ಆಯ್ಕೆಯಾಗಿ ಭಾರೀ ಸುದ್ದಿ ಮಾಡಿದ್ದ ಸೈರಸ್ ಮಿಸ್ತ್ರಿ ಇದೀಗ ಆ ಹುದ್ದೆಯಿಂದ ವಜಾಗೊಂಡು ಮತ್ತೆ ಸುದ್ದಿಯಾಗಿದ್ದಾರೆ. ಆದರೆ ಇನ್‌ಫೋಸಿಸ್‌ನಲ್ಲಿ ಹಿರಿಯ



ಅಧಿಕಾರಿಗಳು ಒಬ್ಬೊಬ್ಬರಾಗಿ ಕಂಪೆನಿಗೆ ‘ಟಾಟಾ’ ಹೇಳಿ ಬಿಕ್ಕಟ್ಟು ಉಂಟಾಗಿದ್ದರೆ, ಟಾಟಾ ಕಂಪೆನಿಯಲ್ಲಿ ಸೈರಸ್ ಮಿಸ್ತ್ರಿ ಅವರಿಗೆ ಕಂಪೆನಿಗೆ ‘ಟಾಟಾ’ ಹೇಳುವ ಅವಕಾಶವನ್ನೂ ಕೊಡದೆ ವಜಾ ಮಾಡಲಾಗಿದೆ!

ಆಟದ ಕಣ ರಂಗೇರಿದೆ. ಪರಸ್ಪರ ದೋಷಾರೋಪಗಳು ಬಹಿರಂಗವಾಗಿ ಉರುಳಾಡತೊಡಗಿವೆ. 147 ವರ್ಷಗಳ ಇತಿಹಾಸವುಳ್ಳ ಟಾಟಾ ಉದ್ಯಮ ಗುಂಪು ಎಂದರೆ 57 ಕಂಪೆನಿಗಳ ಒಕ್ಕೂಟ. ಉಪ್ಪಿನಿಂದ ಹಿಡಿದು ಉಕ್ಕು, ಮೊಬೈಲು, ಕೆಮಿಕಲ್ಸ್, ಬೆವರೇಜಸ್, ಕಾಫಿ, ಕಾರು, ಪವರ್ರು, ಸಾಫ್ಟ್‌ವೇರು– ಹೀಗೆ ಟಾಟಾದವರು ಮಾಡದ ಬಿಸಿನೆಸ್ ಇಲ್ಲ. ವಾರ್ಷಿಕ 105 ಶತಕೋಟಿ ಡಾಲರ್‌ಗಳ ವಹಿವಾಟು ಎಂದರೆ ಸಾಮಾನ್ಯವಲ್ಲ. ಆದರೆ ಈ 57 ಕಂಪೆನಿಗಳಲ್ಲಿ ಲಾಭ ತಂದುಕೊಡುವ ಕಂಪೆನಿಗಳೆಷ್ಟು ಎಂಬ ಪ್ರಶ್ನೆ ಒಗೆದರೆ ಸಿಗುವ ಉತ್ತರ ನಿರುತ್ಸಾಹದ್ದು! ಅಂದಾಜು 20 ಕಂಪೆನಿಗಳು ಕಳೆದ ಎಷ್ಟೋ ವರ್ಷಗಳಿಂದ ಸತತ ನಷ್ಟವನ್ನೇ ತೋರಿಸುತ್ತಿವೆ. ಅತ್ಯಧಿಕ ಲಾಭ ತಂದುಕೊಡುತ್ತಿರುವುದು ಟಿಸಿಎಸ್– ಭಾರತದ ಅತಿದೊಡ್ಡ ಸಾಫ್ಟ್‌ವೇರ್ ಕಂಪೆನಿ. ವಿದೇಶಗಳಲ್ಲಿ ಜಾಗ್ವಾರ್ ಲ್ಯಾಂಡ್ ರೋವರ್ಸ್ ಮೂಲಕ ಲಾಭ ಗಿಟ್ಟಿಸುತ್ತಿರುವುದು ಟಾಟಾ ಮೋಟರ್ಸ್. ಉಳಿದ ಕಂಪೆನಿಗಳ ಲಾಭ– ನಷ್ಟ ಅಷ್ಟಕ್ಕಷ್ಟೆ ಎನ್ನುವಂತಿದೆ.

ಹೀಗಿದ್ದ ಕಂಪೆನಿಯನ್ನು ನಾಲ್ಕು ವರ್ಷಗಳ ಕೆಳಗೆ ಚೇರ್‌ಮನ್ ರತನ್ ಟಾಟಾ ಅವರು ಸೈರಸ್ ಮಿಸ್ತ್ರಿಯ ಹೆಗಲಿಗೇರಿಸಿದರು. ಚೇರ್‌ಮನ್ ಆಗಿ ಆಯ್ಕೆಯಾದ ಸೈರಸ್ ಮಿಸ್ತ್ರಿ ಟಾಟಾ ಕುಟುಂಬದವರಲ್ಲ ಎನ್ನುವುದೇ ಆಗ ದೊಡ್ಡ ಸುದ್ದಿ. ಅದಕ್ಕೂ ಹಿಂದೊಮ್ಮೆ ನವರೋಜಿ ಸಕ್ಲತ್‌ವಾಲಾ ಅವರು ಟಾಟಾ ಉದ್ಯಮದ ಚೇರ್‌ಮನ್ ಆಗಿದ್ದು ಬಿಟ್ಟರೆ ಕುಟುಂಬದ ಹೊರಗಿನವರು ಹೀಗೆ ಕೇಂದ್ರಸ್ಥಾನ ಹೊಂದಿರಲಿಲ್ಲ.

ಲಂಡನ್ ಬಿಸಿನೆಸ್ ಸ್ಕೂಲ್‌ನಲ್ಲಿ ಕಲಿತು ಬಂದಿದ್ದ ಸೈರಸ್ ಮಿಸ್ತ್ರಿ (ಬರ್ತ್‌ಡೇ 4–7–1968)ಯವರ ಎದುರಿಗೆ ಬಹುದೊಡ್ಡ ಸವಾಲುಗಳಿದ್ದವು. ಕಂಪೆನಿ ನಡೆಸುತ್ತಿದ್ದ ಉದ್ಯಮಗಳ ವೈವಿಧ್ಯವೇ ಬಹುದೊಡ್ಡ ಸವಾಲು. ಜಮ್‌ಸೇಟ್‌ಜೀ ಟಾಟಾ ಅವರು 1938ರಲ್ಲಿ ಸ್ಥಾಪಿಸಿದ ಟಾಟಾ ಉದ್ಯಮಕ್ಕೂ ಈಗಿನ ಬಹುರಾಷ್ಟ್ರೀಯ ಬೃಹತ್ ಕಂಪೆನಿಗೂ ಅಜಗಜಾಂತರ ವ್ಯತ್ಯಾಸಗಳಿದ್ದವು. ಅದೂ ಅಲ್ಲದೆ ಐದನೇ ಮೂರರಷ್ಟು ಉದ್ಯಮಗಳು ವಿದೇಶಗಳಲ್ಲಿದ್ದವು.

ಸ್ವತಂತ್ರ ನಿರ್ಧಾರಗಳನ್ನು ಕೈಗೊಂಡ ಪರಿಣಾಮವೇ ಈಗಿನ ವಜಾ ಶಿಕ್ಷೆ ಎನ್ನಲಾಗುತ್ತಿದೆ. ಟಾಟಾ ಉದ್ಯಮದಲ್ಲಿ ಟಾಟಾ ಕುಟುಂಬ ಬಿಟ್ಟರೆ ಅತ್ಯಧಿಕ (ಶೇಕಡಾ 18.4ರಷ್ಟು) ಪಾಲು ಬಂಡವಾಳ ಹೊಂದಿರುವುದು ಶಪೂರ್‌ಜೀ ಪಲ್ಲೋನ್‌ಜಿ ಕುಟುಂಬವೇ. ‘ನನಗೆ ಸ್ವಾತಂತ್ರ್ಯವನ್ನೇ ಕೊಡಲಿಲ್ಲ, ಎಲ್ಲವನ್ನೂ ರತನ್ ಟಾಟಾ ಅವರೇ ಕೆಲವು ನಿರ್ದೇಶಕರ ಮೂಲಕ ತೆರೆಯ ಹಿಂದಿನಿಂದ ನಿಯಂತ್ರಿಸುತ್ತಿದ್ದರು’ ಎಂದಿದ್ದಾರೆ ಮಿಸ್ತ್ರಿ! ಜತೆಗೆ ‘ಟಾಟಾದ ಹಲವು ಕಂಪೆನಿಗಳಲ್ಲಿ ಹಣಕಾಸಿನ ಅಪರಾ ತಪರಾ ನಡೆದಿದೆ. ನಾನು ಪಾರದರ್ಶಕ ಆಡಳಿತ ತರಲು ಬಯಸಿದೆ. ಅದಕ್ಕೇ ವಜಾ ಮಾಡಿದ್ದಾರೆ’ ಎಂಬ ಆರೋಪವನ್ನೂ ಹೊರಿಸಿದರು. ಟಾಟಾ ಸನ್ಸ್ ಕೂಡಾ ಆರೋಪಗಳಿಗೆ ಬಹಿರಂಗ ಪ್ರತ್ಯುತ್ತರ ಕೊಡುತ್ತಿದೆ.

ಮಿಸ್ತ್ರಿ ಅವರನ್ನು ವಜಾ ಮಾಡಿದ್ದೇಕೆ ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಇನ್ನೂ ಸಿಕ್ಕಿಲ್ಲ. ಈ ವರ್ಷ ಉದ್ಯಮದ ಲಾಣ ಶೇಕಡಾ 5ರಷ್ಟು ಕಡಿಮೆ ಆಯಿತು ಎನ್ನಲಾಗುತ್ತಿದೆ. ಬ್ರಿಟನ್ನಿನ ನಷ್ಟದಲ್ಲಿದ್ದ ಉಕ್ಕಿನ ಬಿಸಿನೆಸ್ ಮಾರಾಟ ಮಾಡಿದ್ದು ರತನ್ ಟಾಟಾಗೆ ಒಪ್ಪಿಗೆ ಇರಲಿಲ್ಲ ಎಂದೂ ಹೇಳಲಾಗುತ್ತಿದೆ. ಮಿಸ್ತ್ರಿ ಅವರು ಹೊಂದಿರುವ ಐರಿಶ್ ನಾಗರಿಕತ್ವವನ್ನು ತ್ಯಜಿಸಬೇಕು ಎಂಬ ಷರತ್ತನ್ನು ಒಪ್ಪಲಿಲ್ಲವಂತೆ ಎನ್ನುವವರೂ ಇದ್ದಾರೆ.

ಮುಂದೇನು... ಎನ್ನುವುದೀಗ ಮಿಲಿಯನ್ ಡಾಲರ್ ಪ್ರಶ್ನೆಯೇ. 78ರ ಹರೆಯದ ರತನ್ ಟಾಟಾ ಮತ್ತೆ ಚೇರ್‌ಮನ್ ಆಗಿರುವುದು ತಾತ್ಕಾಲಿಕವಾಗಿ. ಮಿಸ್ತ್ರಿ ಅವರ ಶೇಕಡಾ 18.4 ರಷ್ಟು ಷೇರುಗಳನ್ನು ಖರೀದಿಸುವ ಶ್ರೀಮಂತರಿಗಾಗಿ ಟಾಟಾ ಕಂಪೆನಿ ಹುಡುಕಾಡುತ್ತಿದೆಯಂತೆ. ಆದರೆ ಮಿಸ್ತ್ರಿ ಆ ಷೇರುಗಳನ್ನು ಮಾರಲು ಸಿದ್ಧರಿದ್ದಾರೆಯೆ ಎನ್ನುವುದು ಗೊತ್ತಿಲ್ಲ. ಹಾಗೊಂದು ವೇಳೆ ಯಾರಾದರೂ ಖರೀದಿಸಿದರೆ ಅದರ ಒಟ್ಟು ಮೊತ್ತವೇ 16 ಶತಕೋಟಿ ಡಾಲರ್ ಆಗಬಹುದು ಎನ್ನಲಾಗುತ್ತಿದೆ! ಕಡಿಮೆ ಕುಳಗಳ್ಯಾರೂ ಖರೀದಿಸುವುದು ಕಷ್ಟ.

ಹೊಸ ಚೇರ್‌ಮನ್ ಆಗಿ ರತನ್ ಟಾಟಾ ಮತ್ತು ಸೈರಸ್ ಮಿಸ್ತ್ರಿ ಇಬ್ಬರಿಗೂ ಸಂಬಂಧಿ ಆಗಿರುವ ನೋಯೆಲ್ ಟಾಟಾ ಬರಬಹುದು ಎನ್ನಲಾಗುತ್ತಿದೆ. ಆತ ವೆಸ್ಟ್‌ಸೈಡ್ ಎಂಬ ಬಟ್ಟೆ ಉದ್ಯಮದ ಅಧಿಪತಿ. ಪೆಪ್ಸಿಕೋ ಕಂಪೆನಿಯ ಮುಖ್ಯಸ್ಥೆ ಇಂದ್ರಾ ನೂಯಿ ಮತ್ತು ವೊಡಾಫೋನ್ ಕಂಪೆನಿಯನ್ನು ಲಾಭದಾಯಕವಾಗಿಸಿದ ಅರುಣ್ ಸರೀನ್ ಹೆಸರೂ ಕೇಳಿಬರುತ್ತಿದೆ. ಏನಿದ್ದರೂ ಮಿಸ್ತ್ರಿ ಮುಂದಿನ ನಡೆ ಏನು.. ಎನ್ನುವುದು ‘ಮಿಸ್ಟರಿ’ಯೇ! ಹಿಂದೆ ಮಿಸ್ತ್ರಿಯವರನ್ನು ಚೇರ್‌ಮನ್ ಆಗಿ ನೇಮಿಸಲು ಒಂದು ವರ್ಷದ ಹುಡುಕಾಟ ನಡೆದಿತ್ತು. ಈಗ ನಾಲ್ಕು ತಿಂಗಳ ಒಳಗಾಗಿ ಹೊಸ ಚೇರ್‌ಮನ್ ಹುಡುಕಿ ಎಂದು ರತನ್ ಟಾಟಾ ಹೇಳಿದ್ದಾರಂತೆ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65